# ಜಂಬದ ಇಲಿ

■ ಸುರೇಶ ಕಂಬಳಿ
ಕಲೆ: ಸಂತೋಷ್ ಸಸಿಹಿತ್ಲು



ಆನೆಯೊಂದು ದಾರಿಯಲಿ
ಪುಟ್ಟ ಇಲಿಯ ನೋಡಿತು
ಎಲ್ಲಿ ಹೊರಟೆ ಹೇಳು ಈಗ
ಎಂದು ಅದನು ಕೇಳಿತು

ಪುಟ್ಟ ಇಲಿ ಜಂಬದಿಂದ
ಪೇಟೆ ಕಡೆಗೆ ಎಂದಿತು
ಜೇಬಿನಿಂದು ನೋಟು ತೆಗೆದು
ಮತ್ತೆ ಮತ್ತೆ ಎಣಿಸಿತು

ಕಾಸು ಕೊಟ್ಟು ಗೋಬಿ ಐಸು
ತಿನುವೆ ಲಾಲಿಪಪ್ಪು
ಇದನು ಕೇಳುತ ಆನೆಯ
ಮಾರಿ ಆಯ್ತು ಕಪ್ಪು

ಗೇಲಿ ಮಾಡುತ ಇಲಿಯು
ಮಾಡಿತು ಹೀಗೆ ಡೌಲು
ತಾನೆ ದೊಡ್ಡವ ಎನ್ನುತಲಿ
ಹಾಕಿತು ಅಡ್ಡಗಾಲು

ಹಾಗೆ ಮುಂದೆ ಹೋಗಲು
ಭರ್‍ರನೆ ಬೀಸಿತು ಗಾಳಿ
ಕೈಯಲಿ ಇದ್ದ ನೋಟಂತೂ
ಹಾರಿತು ತೇಲಿ ತೇಲಿ

ತನ್ನಯ ತಪ್ಪಿಗೆ ಮರಗುತಲಿ
ಇಲಿಯು ಆಯಿತು ಸಪ್ಪೆ
ಜಂಬದ ಮಾತು ಆಡುತಲಿ
ಆಯಿತು ಬಾವಿಯ ಕಪ್ಪೆ





**ಶರದ್ವಿ ಭಾಗ್ವಾಲೆ**
9ನೇ ತರಗತಿ, ಬಿಜಿಎಸ್
ಸೆಂಟ್ರಲ್ ಸ್ಕೂಲ್
ಭದ್ರಾವತಿ

ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಎಳೆಯರು ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ. **ವಿಳಾಸ:** editorsu@sudha.co.in





**ತೃಪ್ತಿ**
10ನೇ ತರಗತಿ, ವಿಜಯ
ವಿಠ್ಠಲ ವಿದ್ಯಾಶಾಲೆ,
ಮೈಸೂರು



**ಸಮನ್ವಿ ರಂಜಿತ್**
6ನೇ ತರಗತಿ,
ನ್ಯಾಷನಲ್ ಪಬ್ಲಿಕ್
ಸ್ಕೂಲ್, ಯಲಹಂಕ

